ಪ್ರಮಾಣ ವಚನ ಬೋಧಿಸಿದ ದಿನಾಂಕಃ **09.04.2026**
ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.

**ಮುಂದುವರೆದ ವಾಟೀ ಸವಾಲುಃ 3 ನೇ ಪ್ರತಿವಾದಿ ಪರ ಶ್ರೀ ಆರ್.ಎಂ. ವಕೀಲರಿಂದ**

**2008** ರಲ್ಲಿ ಆಗಿರುವ ವಿಲ್ **2015** ರಲ್ಲಿ ರದ್ದಾಗಿದೆ ಎಂದು ತಿಳಿಸಿದ್ದು, ಸದರಿ ದಾಖಲೆಗಳ ಮೂಲ ಪತ್ರಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ? ಎಂದರೆ ಇಲ್ಲ. ಸಾಕ್ಷಿಯು ಮುಂದುವರೆದು ಸದರಿ ದಾಖಲೆಗಳು ನನ್ನ ಅಜ್ಜಿಯ ಬಳಿ ಇದೆ, ಅವರು ಎಲ್ಲಿ ಇಟ್ಟಿದ್ದಾರೆಂದು ಗೊತ್ತಿಲ್ಲ ಎಂದು ಹೇಳುತ್ತಾರೆ. ಈ ಬಗ್ಗೆ ಅಜ್ಜಿಯನ್ನು ಕೇಳಿದ್ದೇನೆ, ಆಗ ಅವರು ಸದರಿ ಪತ್ರಗಳು ಕಳೆದುಹೋಗಿವೆ ಎಂದು ಹೇಳಿದರು. ವಿಲ್ ರದ್ದಾದ ನಂತರ ನನ್ನ ಅಜ್ಜಿ ಮತ್ತು ಇತರರು ಸೇರಿ ಬೇರೆಯವರಿಗೆ ಕ್ರಯಪತ್ರಗಳನ್ನು ಮಾಡಿಕೊಟ್ಟಿದ್ದಾರೆ ಎಂದರೆ ಸರಿ. ಅಸಲು ದಾವೆ ಸಂಖ್ಯೆಃ**485/2015** ದಾವೆಯು ಈಗ ಇತ್ಯರ್ಥವಾಗಿದೆ. ಸದರಿ ಕೇಸಿನಲ್ಲಿ ಲಕ್ಷ್ಮಮ್ಮನವರು ಹಾಜರಾಗದೇ ಇದ್ದ ಕಾರಣ ದಾವೆಯು ವಜಾ ಆಗಿದೆ. ಸದರಿ ದಾವೆಯಲ್ಲಿ ವಾದಿಯು ಪಕ್ಷಗಾರರಾಗಿದ್ದರಾ? ಎಂದರೆ ಹೌದು. ಸದರಿ ಕೇಸಿನಲ್ಲಿ ಸರ್ವೆ ನಂ.**64/2** ರ ಆಸ್ತಿಯ ಮೇಲೆ ದಾವೆ ಹಾಕಲಾಗಿತ್ತು. ಈ ಕೇಸಿನ ವಾದಿಯು **1** ನೇ ಪ್ರತಿವಾದಿಯ ಪರವಾಗಿ ಜಿ.ಪಿ.ಎ. ಪತ್ರ ಬರೆದುಕೊಟ್ಟಿದ್ದಾರೆಂದು ಅದರ ಆಧಾರದ ಮೇಲೆ **1** ನೇ ಪ್ರತಿವಾದಿಯು ಅಸಲು ದಾವೆ ಸಂಖ್ಯೆಃ**485/2015** ದಾವೆಯನ್ನು ಹಾಕಿದ್ದರು ಎಂದರೆ ಇರಬಹುದು. ಸದರಿ ದಾವೆಯಲ್ಲಿ **1** ನೇ ಪ್ರತಿವಾದಿಯು ಉಳಿಕೆ ಜಮೀನು ಬೇಕು ಎಂದು ಪರಿಹಾರ ಕೇಳಿದ್ದರು. ವಾದಿಯು **1** ನೇ ಪ್ರತಿವಾದಿಗೆ ಬರೆದುಕೊಟ್ಟ ಅಧಿಕಾರ ಪತ್ರವನ್ನು ಈ ನ್ಯಾಯಾಲಯದಲ್ಲಿ ಹಾಜರುಪಡಿಸಿದ್ದೀರಾ? ಎಂದರೆ ಇಲ್ಲ.

ದಿನಾಂಕಃ**04.12.2015** ರಂದು ಒಂದೇ ದಿನ ಎರಡು ಕ್ರಯಪತ್ರಗಳಾಗಿರುತ್ತವೆ ಎಂದರೆ ಸಾಕ್ಷಿಯು ಒಟ್ಟು **4** ಕ್ರಯಪತ್ರಗಳಾಗಿರುತ್ತವೆ ಎಂದು ಹೇಳುತ್ತಾರೆ. ಈ ಕೇಸಿನಲ್ಲಿ ರಂಗಪ್ಪ ಮತ್ತು ಹೊನ್ನಪ್ಪನ ಪತ್ರಗಳನ್ನು ಹಾಜರುಪಡಿಸಿದ್ದೇನೆ. ಸಾಕ್ಷಿಗೆ

ನಿ.ಪಿ.5 ಮತ್ತು 6 ರ ದಾಖಲಾತಿಗಳನ್ನು ತೋರಿಸಿ ಸದರಿ ದಾಖಲಾತಿಗಳ ಪ್ರಕಾರ ದಿನಾಂಕ:30.07.2015 ರಂದು ವಾದಿಯು 3 ನೇ ಪ್ರತಿವಾದಿಗೆ ಜಿ.ಪಿ.ಎ. ಪತ್ರ ಬರೆದುಕೊಟ್ಟಿದ್ದಾರೆಂದು ಕೇಳಿದಾಗ ಸಾಕ್ಷಿಯು ಹೌದು ಎಂದು ಒಪ್ಪಿಕೊಳ್ಳುತ್ತಾರೆ. ಸದರಿ ಪತ್ರಗಳಲ್ಲಿರುವ ಫೋಟೋ ಮತ್ತು ಹೆಬ್ಬೆಟ್ಟಿನ ಗುರುತು ವಾದಿಯದ್ದು ಎಂದರೆ ಸರಿ. 3 ನೇ ಪ್ರತಿವಾದಿಯು ವಾದಿ ಮತ್ತು 1 ಮತ್ತು 2 ನೇ ಪ್ರತಿವಾದಿಗಳಿಗೆ ಕರಾರು ಪತ್ರದ ಆಧಾರದ ಮೇಲೆ ಕ್ರಯಪತ್ರ ನೋಂದಣಿ ಮಾಡಿಕೊಡುವಂತೆ ನೋಟೀಸ್‌ನ್ನು ಕೊಟ್ಟಿದ್ದರು ಎಂದರೆ ಗೊತ್ತಿಲ್ಲ. ಸದರಿ ನೋಟೀಸ್‌ಗೆ ವಾದಿ ಹಾಗೂ 1 ಮತ್ತು 2 ನೇ ಪ್ರತಿವಾದಿಗಳು ಪ್ರತ್ಯುತ್ತರ ಕೊಟ್ಟಿದ್ದಾರಾ? ಎಂದರೆ ಗೊತ್ತಿಲ್ಲ. ಕರಾರುಪತ್ರ ಹಾಗೂ ಜಿ.ಪಿ.ಎ. ಪತ್ರವನ್ನು ವಾದಿಯ ಜೊತೆಗೆ 1 ಮತ್ತು 2 ನೇ ಪ್ರತಿವಾದಿಯರೂ ಕೂಡ ಸೇರಿ ಬರೆದುಕೊಟ್ಟಿದ್ದಾರೆ ಎಂದರೆ ಸರಿ. ವಾದಿಯು ಮೋಸ ಮಾಡಿ ಕರಾರುಪತ್ರ ಮತ್ತು ಜಿ.ಪಿ.ಎ. ಪತ್ರವನ್ನು ಬರೆಸಿಕೊಂಡಿದ್ದಾರೆಂದು 3 ನೇ ಪ್ರತಿವಾದಿಯ ಮೇಲೆ ಪೊಲೀಸರಿಗೆ ದೂರು ಕೊಟ್ಟಿದ್ದಾರಾ? ಎಂದರೆ ಇಲ್ಲ. 3 ನೇ ಪ್ರತಿವಾದಿಯು ಸಾಕಷ್ಟು ಆಸ್ತಿ ಹೊಂದಿದ್ದಾರೆ ಹಾಗೂ ಆರ್ಥಿಕವಾಗಿ ಸದೃಢರಾಗಿದ್ದಾರೆ ಎಂದರೆ ಗೊತ್ತಿಲ್ಲ. 3 ನೇ ಪ್ರತಿವಾದಿಯ ಸಹೋದರರಾದ ಪಿ.ನರಸಿಂಹಯ್ಯನವರು ಬೆಂಗಳೂರಿನಲ್ಲಿ ವಕೀಲರಾಗಿದ್ದಾರೆ ಎಂದರೆ ಸರಿ. ಸದರಿ ಪಿ.ನರಸಿಂಹಯ್ಯನವರು ಕರಾರುಪತ್ರ ಮತ್ತು ಜಿ.ಪಿ.ಎ. ಪತ್ರವನ್ನು ತಯಾರು ಮಾಡಿದ್ದಾರೆ ಎಂದರೆ ಗೊತ್ತಿಲ್ಲ.

ದಿನಾಂಕ:30.07.2015 ರಂದು 1 ನೇ ಪ್ರತಿವಾದಿಯು ಕೆಲವು ಖಾಲಿ ಕಾಗದಗಳಲ್ಲಿ ವಾದಿಯ ಸಹಿಗಳನ್ನು ಪಡೆದುಕೊಂಡಿದ್ದಾರೆಂದು ದಾವಾ ಪತ್ರದ 4 ನೇ ಪ್ಯಾರಾದಲ್ಲಿ ತಿಳಿಸಿದ್ದು, ಈ ಬಗ್ಗೆ ಮಾಹಿತಿ ಇದೆಯಾ? ಎಂದರೆ ಇಲ್ಲ. 2015 ರಲ್ಲಿ ವಾದಿಗೆ ಹಣದ ಅವಶ್ಯಕತೆ ಇತ್ತು, ಆ ಕಾರಣಕ್ಕಾಗಿ ವಿಲ್‌ನ್ನು ರದ್ದುಪಡಿಸಿದ್ದೇನೆಂದು ದಾವಾ ಪತ್ರದ 5 ನೇ ಪ್ಯಾರಾದಲ್ಲಿ ತಿಳಿಸಿದ್ದಾರೆ ಎಂದರೆ ಸಾಕ್ಷಿಯು ವಾದಿಗೆ ಹಣದ ಅವಶ್ಯಕತೆ ಇರಲಿಲ್ಲ, ಆದರೆ 1 ನೇ ಪ್ರತಿವಾದಿಯು ನಾನು ಸಾಕುತ್ತೇನೆಂದು ವಿಲ್ ಬರೆಸಿಕೊಂಡಿದ್ದಾರೆಂದು ಹೇಳುತ್ತಾರೆ. ಸಾಕ್ಷಿಯು ಮುಂದುವರೆದು ವಿಲ್‌ನ್ನು ರದ್ದುಪಡಿಸಿ ಹೊನ್ನಪ್ಪ, ರಂಗಪ್ಪ ಮತ್ತು ಲಕ್ಷ್ಮಯ್ಯನವರಿಗೆ ಸ್ವಲ್ಪ ಸ್ವಲ್ಪ ಆಸ್ತಿಯನ್ನು

ಮಾರಾಟ ಮಾಡಿ, ಕ್ರಯದ ಮೊತ್ತವನ್ನು ಅವರ ಹೆಣ್ಣು ಮಕ್ಕಳಿಗೆ ಕೊಟ್ಟಿದ್ದಾರೆಂದು ಹೇಳುತ್ತಾರೆ. ಇದುವರೆಗೂ ವಾದಿಯು 1 ಮತ್ತು 2 ನೇ ಪ್ರತಿವಾದಿಯರು ಮೋಸ ಮಾಡಿದ್ದಾರೆಂದು ಏನಾದರೂ ಕೇಸು ಹಾಕಿದ್ದಾರಾ? ಎಂದರೆ ಇಲ್ಲ. ದಾವಾ ಆಸ್ತಿ ಹಾಗೂ ಉಳಿಕೆ ವಿಸ್ತೀರ್ಣದ ಖಾತೆಯು ಈಗಲೂ ಕೂಡ ವಾದಿಯ ಹೆಸರಿನಲ್ಲಿ ಇದೆ ಎಂದರೆ ಸರಿ. ವಾದಿಯು 2015 ರಿಂದ ಇಲ್ಲಿಯವರೆಗೂ 3 ನೇ ಪ್ರತಿವಾದಿಯ ಹೆಸರಿಗೆ ಕ್ರಯಪತ್ರ ನೋಂದಣಿ ಮಾಡಿಕೊಟ್ಟಿದ್ದಾರಾ? ಎಂದರೆ ಇಲ್ಲ. ವಾದಿಯು 1 ಮತ್ತು 2 ನೇ ಪ್ರತಿವಾದಿಯ ಜೊತೆ ಜಗಳ ಮಾಡಿಕೊಂಡು ಬಂದು ನಮ್ಮ ಜೊತೆ ಇದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯು ನಮ್ಮ ಜೊತೆ ವಾಸ ಮಾಡುತ್ತಿದ್ದಾರೆಂದು ನಾನು ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು 10 ವರ್ಷದಿಂದ ವಾದಿಯು ನಮ್ಮ ಜೊತೆ ಇದ್ದಾರೆಂದು ಹೇಳುತ್ತಾರೆ. ವಾದಿಯು ನಮ್ಮ ಮನೆಯಲ್ಲಿ ನಮ್ಮ ಜೊತೆ ವಾಸ ಮಾಡುತ್ತಿದ್ದಾರೆ ಎಂದು ತೋರಿಸಲು ಚುನಾವಣಾ ಗುರುತಿನ ಚೀಟಿ, ಪಡಿತರ ಚೀಟಿ ಹಾಗೂ ಮತದಾರರ ಪಟ್ಟಿಯಲ್ಲಿ ನಮೂದಾಗಿದೆಯಾ? ಎಂದರೆ ಇಲ್ಲ. ವಾದಿಯು ದಾವಾ ಆಸ್ತಿಯನ್ನು 3 ನೇ ಪ್ರತಿವಾದಿಗೆ ಮಾರಾಟ ಮಾಡಲು ಒಪ್ಪಿ ಅವರ ಪರವಾಗಿ ಜಿ.ಪಿ.ಎ. ಮತ್ತು ಕರಾರುಪತ್ರ ಬರೆದುಕೊಟ್ಟು ಎಂಟೂವರೆ ಲಕ್ಷ ರೂಪಾಯಿಗಳ ಹಣ ಪಡೆದುಕೊಂಡಿದ್ದರೂ ಕೂಡ ಅವರಿಗೆ ಮೋಸ ಮಾಡುವ ಉದ್ದೇಶದಿಂದ ಅವರು ಯಾವುದೇ ಪತ್ರ ಬರೆದುಕೊಟ್ಟಿಲ್ಲ ಎಂದು ಸುಳ್ಳು ಕೇಸು ಹಾಕಿದ್ದಾರೆ ಎಂದರೆ ಸಾಕ್ಷಿಯು ವಾದಿಯು ಹಣವನ್ನು ಪಡೆದುಕೊಂಡಿಲ್ಲ, ಆದರೆ 1 ನೇ ಪ್ರತಿವಾದಿಯು ವಿಲ್ ಬರೆಸಿಕೊಂಡಿದ್ದಾರೆಂದು ಹೇಳುತ್ತಾರೆ. ಸಾಕ್ಷಿಯು ಮುಂದುವರೆದು 1 ನೇ ಪ್ರತಿವಾದಿಯು ವಂಶವೃಕ್ಷ ಮಾಡಿಸಿಕೊಡುತ್ತೇನೆಂದು ತಹಶೀಲ್ದಾರ್ ರವರ ಮುಂದೆ ವಾದಿಯನ್ನು ಕರೆದುಕೊಂಡು ಹೋಗಿದ್ದಾರೆಂದು ನನಗೆ ವಾದಿ ಹೇಳಿರುತ್ತಾರೆ ಎಂದು ಹೇಳುತ್ತಾರೆ. ವಾದಿ, 1 ರಿಂದ 3 ನೇ ಪ್ರತಿವಾದಿಯರ ನಡುವೆ ಆಗಿರುವಂತಹ ಜಿ.ಪಿ.ಎ. ಪತ್ರ ಹಾಗೂ ಕರಾರು ಪತ್ರದ ಸಮಯದಲ್ಲಿ ನೀವು ಹಾಜರಾಗಿದ್ದೀರಾ? ಎಂದರೆ ಇಲ್ಲ.

ವಾದಿಯ ದಿನಾಂಕ:**19.04.2016** ರಂದು ಜಿ.ಪಿ.ಎ. ರದ್ದುಪಡಿಸಲು **3** ನೇ ಪ್ರತಿವಾದಿಗೆ ಒಂದು ನೋಟೀಸ್ ಕೊಟ್ಟಿದ್ದರು ಎಂದರೆ ಸರಿ. ಜಿ.ಪಿ.ಎ. ಪತ್ರದಲ್ಲಿ ವಾದಿ, **1** ಮತ್ತು **2** ನೇ ಪ್ರತಿವಾದಿಯು **20** ಗುಂಟೆ ಸಂಬಂಧಿಸಿದಂತೆ ಜಿ.ಪಿ.ಎ. ಪತ್ರ ಬರೆದುಕೊಟ್ಟಿದ್ದಾರೆ. ನೋಟೀಸ್ ನಲ್ಲಿ **2** ಎಕರೆ **6** ಗುಂಟೆಗೆ ಜಿ.ಪಿ.ಎ. ಕೊಟ್ಟಿದ್ದಾರೆಂದು ನಮೂದಾಗಿದೆ ಎಂದರೆ ಸರಿ. ನಿ.ಪಿ.**11** ರ ಪ್ರಕಾರ **1** ಮತ್ತು **2** ನೇ ಪ್ರತಿವಾದಿಗೆ ಯಾವುದೇ ನೋಟೀಸ್‌ನ್ನು ನೀಡದೇ ಕೇವಲ **3** ನೇ ಪ್ರತಿವಾದಿಗೆ ಏಕೆ ನೋಟೀಸ್ ಕೊಟ್ಟಿದ್ದೀರಾ? ಎಂದರೆ ಗೊತ್ತಿಲ್ಲ. ಸದರಿ ನೋಟೀಸ್‌ನಲ್ಲಿ ವಾದಿಯು ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ ಸಹಿ ಮಾಡಿದ್ದಾರೆಂದು ತಿಳಿಸಿದ್ದಾರೆ ಎಂದರೆ ಸರಿ. ದಾವಾ ಆಸ್ತಿಯ ಬೆಲೆ ಹೆಚ್ಚಾಗುತ್ತಿರುವ ಕಾರಣ ವಾದಿಯು ಕರಾರು ಪತ್ರ ಮತ್ತು ಜಿ.ಪಿ.ಎ. ಪತ್ರ ಬರೆದುಕೊಟ್ಟಿದ್ದರೂ ಕೂಡ **3** ನೇ ಪ್ರತಿವಾದಿಗೆ ಕ್ರಯಪತ್ರ ನೋಂದಣಿ ಮಾಡಿಕೊಡುವುದನ್ನು ತಪ್ಪಿಸಿಕೊಳ್ಳುವ ಉದ್ದೇಶದಿಂದ ಸುಳ್ಳು ಕೇಸನ್ನು ಹಾಕಿದ್ದಾರೆ ಎಂದರೆ ಸರಿಯಲ್ಲ. ವಾದಿಯು ನ್ಯಾಯಾಲಯಕ್ಕೆ ಬಂದರೆ ಸತ್ಯಾಂಶ ತಿಳಿಯುತ್ತದೆ ಎಂಬ ಕಾರಣಕ್ಕಾಗಿ ನಾನು ಜಿ.ಪಿ.ಎ. ಪತ್ರವನ್ನು ಪಡೆದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. **3** ನೇ ಪ್ರತಿವಾದಿಗೆ ಯಾವುದೇ ನೋಟೀಸ್ ತಲುಪಿಲ್ಲ ಎಂದರೆ ಗೊತ್ತಿಲ್ಲ. **3** ನೇ ಪ್ರತಿವಾದಿಯು ಬೆಂಗಳೂರಿನಲ್ಲಿ ವಾಸ ಮಾಡುತ್ತಿದ್ದಾರೆ, ಅವರು ಕತ್ತಿಹೊಸಹಳ್ಳಿಯಲ್ಲಿ ವಾಸ ಮಾಡುತ್ತಿಲ್ಲ ಎಂದರೆ ಸರಿ. **3** ನೇ ಪ್ರತಿವಾದಿಯ ಸ್ವಂತ ಊರು ಕತ್ತಿಹೊಸಹಳ್ಳಿ, ಆದರೆ ಅವರು ಅಲ್ಲಿ ವಾಸ ಮಾಡುತ್ತಿಲ್ಲ ಎಂದರೆ ಸರಿ. ದಾವಾ ಆಸ್ತಿಯು ಕೆ.ಐ.ಎ.ಡಿ.ಬಿ.ಗೆ ಸ್ವಾಧೀನವಾಗಿರುವ ಕಾರಣ ಅಕ್ರಮ ಲಾಭ ಪಡೆಯಲು ನಾನು, ವಾದಿ, **1** ಮತ್ತು **2** ನೇ ಪ್ರತಿವಾದಿಗಳು ಶಾಮೀಲಾಗಿ ಸುಳ್ಳು ಕೇಸನ್ನು ಹಾಕಿದ್ದೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ**

(ನನ್ನ ಉಕ್ತಲೇಖಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತ)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ದೊಡ್ಡಬಳ್ಳಾಪುರ.